ಅನೇಕವನ್ನು 'Interior Landscape' ಅನ್ನುವ ಸಂಕಲನದಲ್ಲಿ ಇಂಗ್ಲಿಷ್ ಜನಕ್ಕೆ, ಭಾಷಾಂತರ ಮಾಡುವುದರ ಮೂಲಕ ಪರಿಚಯ ಮಾಡಿಕೊಟ್ಟಿದ್ದಾರೆ. ಇಷ್ಟರ ಜೊತೆಗೆ ಇಂಗ್ಲಿಷಿನಲ್ಲಿ ಬರೆದ ಸ್ವಂತ ಕವನಗಳ ಎರಡನೆಯ ಸಂಕಲನವನ್ನೂ ಅಚ್ಚಿಗೆ ಸಿದ್ಧಮಾಡಿದ್ದಾರೆ. ಇಷ್ಟೊಂದು ಕೆಲಸವನ್ನು ಕೆಲವಾರು ವರ್ಷಗಳ ಅವಧಿಯಲ್ಲೇ ಮಾಡಿರುವ ರಾಮಾನುಜನ್ ಅವರ ಸಾಹಸ ಅಸಾಮಾನ್ಯವಾದದ್ದು.

ಜೊತೆಗೆ ಕನ್ನಡದಲ್ಲಿ ಸಣ್ಣ ಕತೆಗಳು: ಗಾದೆಗಳ ಮೇಲೆ, ಜನಪದ ಕತೆಗಳ ಮೇಲೆ ನಡೆಸಿರುವ ಸಂಶೋಧನೆ; ಹೆಂಡತಿ ಇಂಗ್ಲಿಷಿನಲ್ಲಿ ಬರೆದ ಕಾದಂಬರಿಯ ಅನುವಾದ 'ಹಳದಿ ಮೀನು'.

ಮೊನ್ನೆ ತಾನೇ ಅಮೆರಿಕಕ್ಕೆ ಹಿಂದಿರುಗಿದವರು ಗೆಳೆಯನಿಗೆ ಬರೆದ ಮೊದಲ ಪತ್ರದಲ್ಲಿ ಒಂದು ಸಣ್ಣ ಕವನ ಬರೆದು ಕಳಿಸಿದ್ದಾರೆ. ದಿನಕ್ಕೆ ಇಪ್ಪತ್ತು ನಾಲ್ಕು ಗಂಟೆ ಕಾಲವೂ ಅವರ ಹಾಗೆ ಕವಿ ಮನಸ್ಸನ್ನು ತೆರೆದಿಟ್ಟುಕೊಂಡು ಪ್ರಪಂಚಸ್ಪರ್ಶಕ್ಕೆ ಸಿದ್ಧವಾದ ಮೀಸೆ ಇರುವ ಪ್ರಾಣಿಗಳು ಕಡಿಮೆ. ಸಾಹಿತ್ಯ ಸೃಷ್ಟಿ ಕಾರ್ಯಕ್ಕೆ ಅಗತ್ಯವಾದ ಶಿಸ್ತಿನ ಜೊತೆಗೆ ಬರೆಯುವ ರೀತಿಯಲ್ಲೂ ಅದೇ ರೀತಿಯ ಶಿಸ್ತು ಸಂಯಮವನ್ನು ತೋರಿಸಿರುವುದು ರಾಮಾನುಜನ್ ಅಂತಹ ಕೆಲವರಿಗೆ ಮಾತ್ರ ಸಾಧ್ಯ.

## 'ಕನ್ನಡದಲ್ಲಿ ಬರೆಯಬೇಕು'

ಮೂರು ವರ್ಷದ ಕೆಳಗೆ ಮಾತಾಡುವಾಗ 'ಕಾವ್ಯ ಬರೆಯವುದು ನನಗೆ ಅತ್ಯಗತ್ಯವಾದ ವ್ಯಾಪಾರ. ಯಾವ ಭಾಷೆಯಾದರೂ ಸರಿಯೇ' ಎಂದಿದ್ದವರು ಮೊನ್ನೆ 'ನನಗೆ ಈಚೆಗೇಕೋ ಇಂಗ್ಲಿಷ್ ಭಾಷೆಯಲ್ಲಿ ಬರೆಯುವುದು ಅಷ್ಟಾಗಿ ತೃಪ್ತಿ ಕೊಡುತ್ತಿಲ್ಲ. ಕನ್ನಡದಲ್ಲಿ ಬರೆಯಬೇಕು' ಎಂದರು. ಇದಕ್ಕೆ ಕಾರಣ ಅವರು ಈಚೆಗೆ ಭಾರತೀಯ ಇಂಗ್ಲಿಷಿನಲ್ಲಿ ಬರೆಯುವಾಗ ಅವರಿಗೆ ಎಷ್ಟರಮಟ್ಟಿಗೆ ಯಶಸ್ಸು ಸಾಧ್ಯ ಎನ್ನುವುದರ ಬಗೆಗೆ ಕೂಲಂಕಷವಾಗಿ ಚಿಂತಿಸಿ ಒಂದು ಇತ್ಯರ್ಥಕ್ಕೆ ಬಂದಿರುವುದೇ ಇರಬೇಕು. ಚಿಕ್ಕವರಾಗಿದ್ದಾಗ ನಮ್ಮ ಅನುಭವ ಯಾವ ಭಾಷೆಯಲ್ಲಿ ಆಗುತ್ತದೆಯೋ ಅದೇ ಮುಂದೆ ಬರೆಯಬಹುದಾದ ಕಾವ್ಯಕ್ಕೆ ಆಧಾರ. ನಮ್ಮ ದೇಶದಲ್ಲಿ ಇಂಗ್ಲಿಷ್ ಪಾಠ ಹೇಳಿಕೊಡುತ್ತಿರುವ ರೀತಿ ಕೂಡಾ ತಪ್ಪು, ಅವರ ಪ್ರಕಾರ. ಇಂಗ್ಲಿಷ್ ಮಾತೃಭಾಷೆಯೆನ್ನುವ ಭ್ರಾಂತಿಯನ್ನು ರೂಢಿಸುವ ನಮ್ಮ ಪ್ರವಚನ ಕ್ರಮ ಬದಲಾಗದೇ ನಮ್ಮ ಸ್ವ–ಭಾಷಾ ಜ್ಞಾನವಾಗಲಿ, ಇಂಗ್ಲಿಷ್ ಭಾಷೆಯ ಅರ್ಥವತ್ತಾದ ಅಭ್ಯಾಸವಾಗಲಿ ಸಾಧ್ಯವಿಲ್ಲ ಎನ್ನುವುದು ಅವರ ಖಚಿತ ಅಭಿಪ್ರಾಯ.

ಇಷ್ಟೇ ಖಚಿತವಾದ ಅಭಿಪ್ರಾಯ ಕನ್ನಡ ಕಾವ್ಯದ ಬಗೆಗೆ ತಾವು ಬರೆದಿರುವ ಕವನಗಳ ಹಿಂದಿರುವ ಕಾವ್ಯೋದ್ದೇಶಗಳ ಬಗೆಗೆ.

## ಇಂದು ಪ್ರತಿಭೆಯೇ ಕಡಿಮೆಯೆ?

'ಕನ್ನಡದ ಕವನಗಳಲ್ಲಿ ಸಾಮಾನ್ಯವಾಗಿ ಕಾವ್ಯದ ಜೊತೆಗೆ ಟಿಪ್ಪಣಿಗಳೂ ಕೂಡಿಕೊಂಡಿದ್ದು ಕವನ ಪೇಲವವಾಗುತ್ತದೆ. ಮಾತು ಅಗತ್ಯವಾದದ್ದಕ್ಕಿಂತ ಹೆಚ್ಚಾಗಿ ಓದುಗನ ಕೆಲಸವನ್ನೇ ಕವಿ ಮಾಡಹೊರಟು ಸ್ವಾರಸ್ಯ ಹೋಗುತ್ತದೆ.

'ಕನ್ನಡದಲ್ಲಿ ನಮಗೆ ಈಗಂತೂ ಅಗತ್ಯವಾಗಿರುವುದು ಬರೆದದ್ದನ್ನು ಸಮರ್ಥವಾಗಿ ಬರೆಯುವ ಹದಿನೈದು ಇಪ್ಪತ್ತು ಎರಡನೇ ದರ್ಜೆಯ ಕವಿಗಳು. ಹಿಂದಿನ ತಲೆಮಾರಿನಲ್ಲಿ ಬೇಂದ್ರೆ, ಪುಟ್ಟಪ್ಪ, ಪು.ತಿ.ನ.–ಹೀಗೆ ಕಾವ್ಯದ ಮಾತು ಬಂದಾಗ, ಹಲವಾರು ಹೆಸರು ಹೇಳಬಹುದಾಗಿತ್ತು. ಈಗ? ಅಡಿಗರೊಬ್ಬರ ಹೆಸರು ಮಾತ್ರಾ ಸಾಲದು.